ಕರ್ನಾಟಕ ಸರ್ಕಾರ

ಉಪತಹಶೀಲ್ದಾರರವರ ನ್ಯಾಯಾಲಯ

ಉಪತಹಶೀಲ್ದಾರವರ ನಾಡಕಛೇರಿ, ಹಂಪಸಾಗರ

---

ಸಂ/ಕಂ/ಪಹಣಿ/ವಿವಾದ/12/2015–16 ದಿ..31.3.2016

---

ಉಪಸ್ಥಿತರು :– ಶ್ರೀ ಎ.ಚಂದ್ರನಾಯಕ, ಉಪತಹಶೀಲ್ದಾರರು

ನಾಡಕಛೇರಿ ಹಂಪಸಾಗರ

---

| ವಾದಿಗಳು | ಪ್ರತಿವಾದಿಗಳು |
|---|---|
| ಶ್ರೀ ಕೊಬ್ಬಜ್ಜಿ ಮಹಾಬಲೇಶ್ವರಪ್ಪ | ಶ್ರೀ ಕೆ.ಮಲ್ಲಪ್ಪ |
| ತಂದೆ ದಿ॥ ಈಶ್ವರಪ್ಪ | ತಂದೆ ಬಸಪ್ಪ |
| ಗ್ರಾಮ ಮೋರಿಗೇರಿ | ಮೋರಿಗೇರಿ ಗ್ರಾಮ |

---

**ವಿಷಯ :– ಮೋರಿಗೇರಿ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 615 ಎ ಪೈಕಿ ವಿಸ್ತೀರ್ಣ 2–07 ಎಕರೆ ಜಮೀನನ್ನು ಕ್ರಯದಾರರ ಹೆಸರಿನಲ್ಲಿ ಹಕ್ಕು ಬದಲಾವಣೆ ವಿಷಯದಲ್ಲಿ ತಕರಾರು – ವಿಚಾರಣೆ.**

---

**ಪೀಠಿಕೆ :–**

ಹಗರಿಬೊಮ್ಮನಹಳ್ಳಿ ತಾಲೂಕು ಹಂಪಸಾಗರ ಹೋಬಳಿ, ಮೋರಿಗೇರಿ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 615/ಎ ಪೈಕಿ ವಿಸ್ತೀರ್ಣ 2–07 ಎಕರೆ ಜಮೀನು ಕ್ರಯಪತ್ರ ಸಂಖ್ಯೆ ಹ.ಬೊ.ಹಳ್ಳಿ/00/99/2015–16 ದಿ: 18/4/2015 ರಂದು ಪಹಣಿ ದಾಖಲು ಹಕ್ಕುದಾರರಾದ ಕೊಬ್ಬಜ್ಜಿ ಚಂದ್ರಶೇಖರ ತಂದೆ ದಿ॥ ಕೊಟ್ರಪ್ಪ 1) ಕೊಬ್ಬಜ್ಜಿ ಮಂಜುನಾಥ ತಂದೆ ದಿ॥ ಕೊಟ್ರಪ್ಪ 2) ಕೊಬ್ಬಜ್ಜಿ ಚಂದ್ರ ತಂದೆ ದಿ॥ ಕೊಟ್ರಪ್ಪ 3) ಕೊ॥ ಕೊಟ್ರೇಶ ತಂದೆ ಕೊಟ್ರಪ್ಪ 4) ಕೊ॥ ಗಂಗಮ್ಮ ಗಂಡ ದಿ॥ ಕೊಟ್ರಪ್ಪ 5) ಕೊ॥ ಬಸಪ್ಪ ತಂದೆ ಮಲ್ಲಪ್ಪ 6) ಕೊ॥ ಗುರುಬಸಮ್ಮ ಗಂಡ ದಿ॥ ಸಣ್ಣ ತಮ್ಮಪ್ಪ 7) ಇವರಿಂದ ವಾದಿಗಳು ಕ್ರಯಕ್ಕೆ ಹೊಂದಿರುತ್ತಾರೆ. ಕ್ರಯ ವಹಿವಾಟು ತಾಲೂಕಾ ಭೂಮಿ ಕೇಂದ್ರದಲ್ಲಿ ದಾಖಲಾಗಿ ವಹಿವಾಟು ಸಂಖ್ಯೆ 320/2014–15 ಹಾಗೂ ಹಕ್ಕು ಬದಲಾವಣೆ ಸಂಖ್ಯೆ 129/2014–15 ರಂತೆ ನಮೂನೆ 12 ಹಾಗೂ ನೋಟೀಸು ನಮೂನೆ 21ನ್ನು ಹಕ್ಕು ಬದಲಾವಣೆ ಕ್ರಮಕ್ಕಾಗಿ ಕಂದಾಯ ನಿರೀಕ್ಷಕರು ಹಂಪಸಾಗರ ಇವರಿಗೆ ರವಾನಿಸುತ್ತಾ ಗ್ರಾಮ ಲೆಕ್ಕಾಧಿಕಾರಿ ಮೋರಿಗೇರಿ ಇವರು ಪ್ರಕರಣಕ್ಕೆ ಸಂಬಂಧಿಸಿದ ನಮೂನೆ 12 ಹಾಗೂ ನೋಟೀಸು ನಮೂನೆ 21ನ್ನು ಜಾರಿ ಮಾಡಿರುತ್ತಾರೆ. ನೋಟೀಸುಗಳನ್ನು ಜಾರಿ ಮಾಡಲಾಗಿ ಪ್ರತಿವಾದಿಗಳಿಂದ ತಕರಾರು ಸ್ವೀಕೃತಿ ಸಂಖ್ಯೆ 8333/2014–15 ರಂತೆ ತಕರಾರು ದಾಖಲಾಗಿರುತ್ತದೆ. ತಕರಾರು ದಾಖಲಾದ ಹಿನ್ನೆಲೆಯಲ್ಲಿ ಪ್ರಕರಣವನ್ನು ಕಂದಾಯ ನಿರೀಕ್ಷಕರು, ಹಂಪಸಾಗರ ಇವರು ಮುಂದಿನ ವಿಚಾರಣೆಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಪ್ರಕರಣವನ್ನು ಈ ಮೇಲಿನ ಸಂಖ್ಯೆಯಂತೆ ದಾಖಲಿಸಿಕೊಂಡು ದಿನಾಂಕ: 10/07/2015 ರಿಂದ ದಿನಾಂಕ: 31/03/2016 ರವರೆಗೆ ವಿಚಾರಣೆ ನಡೆಸಲಾಯಿತು. ಪ್ರಕರಣದಲ್ಲಿ ವಾದಿಗಳ ಪರವಾಗಿ ಶ್ರೀ ಜಾಣ ಶಿವಾನಂದ

ವಕೀಲರು ಹಾಗೂ ಪ್ರತಿವಾದಿಗಳ ಪರವಾಗಿ ಶ್ರೀ ಯು.ಕೊಟ್ರೇಶ್ ವಕೀಲರು ವಕಾಲತ್ ವಹಿಸಿಕೊಂಡಿರುತ್ತಾರೆ. ವಾದಿ ಪ್ರತಿವಾದಿಗಳು ಪ್ರಕರಣದಲ್ಲಿ ಹಾಜರಾಗಿದ್ದು ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ ವಿವಾದಿತ ಆಸ್ತಿಯ ಕ್ರಯಪತ್ರ ಸಂಖ್ಯೆ ಹೆಚ್.ಬಿ.ಹೆಚ್/1/00/99/2015-16/ದಿನಾಂಕ: 18/04/2015 ರಂದು ನೊಂದಣಿ ಕಛೇರಿಯಲ್ಲಿ ಶುದ್ಧ ಕ್ರಯವಾಗಿರುವುದು ಕಂಡು ಬರುತ್ತದೆ. ಹಾಗೂ ವಿಕ್ರಯದಾರರು ಜಂಟೀ ಹಕ್ಕುದಾರರಾಗಿದ್ದು ಮಾರಾಟ ಪೂರ್ವದಲ್ಲಿ ಪ್ರಕರಣಕ್ಕೆ ಸಂಬಂಧಿಸಿದ ಆಸ್ತಿಯನ್ನು ತಾಲೂಕಾ ಮೋಜಿಣಿದಾರರಿಂದ ಅಳತೆ ಮಾಡಿಸುತ್ತ ನಿಯಮಾನುಸಾರ 11-ಇ ನಕ್ಷೆ ಸಂಖ್ಯೆ 12020813754981001 ರಂತೆ ಹೊಂದುತ್ತಾ ವಿಕ್ರಯ ಮಾಡಿರುತ್ತಾರೆ. ಪ್ರತಿವಾದಿಗಳು ತಮ್ಮ ತಕರಾರನ್ನು ಸಲ್ಲಿಸಿರುವುರಾದರೂ ತಕರಾರು ಯಾವ ಉದ್ದೇಶ ಹಾಗೂ ಕಾರಣಗಳನ್ನು ನೀಡದೆಯೇ ಪ್ರಕರಣಕ್ಕೆ ತಕರಾರು ಇದೆ ಎಂದು ಸಲ್ಲಿಸಿರುವರು ಹಾಗೂ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯವಾದಿಗಳು ವಕಾಲತೆ ವಹಿಸಿಕೊಂಡಿದ್ದು ಯಾವುದೇ ಲಿಖಿತ ವಾದವನ್ನು ಮಂಡಿಸಿರುವುದಿಲ್ಲ. ಹಾಗೂ ಕ್ರಯಪತ್ರ, ಪಹಣಿ, 11-ಇ ನಕ್ಷೆ ಪರಿಶೀಲಿಸಲಾಗಿ ಕ್ರಯ ವ್ಯವಹಾರವು ನಿಯಮಾನುಸಾರ ನಡೆದಿರುವುದು ಕಂಡು ಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ

## ಆದೇಶ

ಹಗರಿಬೊಮ್ಮನಹಳ್ಳಿ ತಾಲೂಕು ಹಂಪಸಾಗರ ಹೋಬಳಿ ಮೋರಿಗೇರಿ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 615ಎ ಪೈಕಿ ವಿಸ್ತೀರ್ಣ 2-07 ಎಕರೆ ಜಮೀನನ್ನು ವಿಕ್ರಯದಾರರ ಹೆಸರಿನೊಂದಿಗೆ ಜಂಟಿಯಾಗಿ ಕ್ರಯದಾರರಾದ ಶ್ರೀ ಕೊಬ್ಬಜ್ಜಿ ಮಹಾಬಲೇಶ್ವರಪ್ಪ ತಂದೆ ದಿ॥ ಈಶ್ವರಪ್ಪ ಇವರ ಹೆಸರಿನಲ್ಲಿ ಕರ್ನಾಟಕ ಭೂ ಕಂದಯ ಅಧಿನಿಯಮ 1964 ಕಲಂ 128 ಹಾಗೂ 129 ರನ್ವಯ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ. ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ದಿನಾಂಕ: 31.3.16 ರಂದು ಘೋಷಿಸಲಾಗಿದೆ.

ಉಪತಹಶೀಲ್ದಾರರು
ನಾಡಕಛೇರಿ, ಹಂಪಸಾಗರ

**ಪ್ರತಿಗಳು :**

1) ವಾದಿ + ಪ್ರತಿವಾದಿಗಳು
2) ಭೂಮಿ ಕೇಂದ್ರ
3) ಹೆಚ್ಚುವರಿ ಪ್ರತಿ ಕಡತಕ್ಕೆ